**All India Radio: Bangalore**
**National Bulletin In Kannada**
**15.04.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಭಾರತದ ಹಜ್ ಕೋಟಾ ಒಂದು ಲಕ್ಷದ ೭೫ ಸಾವಿರಕ್ಕೆ ಏರಿಕೆ: ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಮಾಹಿತಿ
2. ೧೫ನೇ ಬ್ರಿಕ್ಸ್ ಕೃಷಿ ಸಚಿವರ ಸಭೆಯಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಭಾರತೀಯ ನಿಯೋಗ ನಿಯೋಜನೆ
3. ಬೆಂಗಳೂರಿನಲ್ಲಿಂದು ವೇವ್ಸ್ ಅನಿಮೆ ಮತ್ತು ಮಾಂಗಾ ಸ್ಪರ್ಧೆಯ ರಾಜ್ಯ ಮಟ್ಟದ ಅರ್ಹತಾ ಸುತ್ತು ಆಯೋಜನೆ
4. ೧೫ನೇ ಹಾಕಿ ಇಂಡಿಯಾ ಹಿರಿಯರ ಪುರುಷರ ರಾಷ್ಟ್ರೀಯ ಪಂದ್ಯಾವಳಿ: ಅಂತಿಮ ಪಂದ್ಯದಲ್ಲಿಂದು ಮಧ್ಯಪ್ರದೇಶ - ಪಂಜಾಬ್ ಮುಖಾಮುಖಿ
5. ಐಪಿಎಲ್ ಟಿ-೨೦ ಕ್ರಿಕೆಟ್: ಇಂದು ಪಂಜಾಬ್ ಕಿಂಗ್ಸ್ -ಕೊಲ್ಕತ್ತಾ ನೈಟ್‌ರೈಡರ್ಸ್ ಸೆಣಸು

<><><><>

೨೦೧೪ರಲ್ಲಿ ೧ ಲಕ್ಷದ ೩೬ ಸಾವಿರ ಇದ್ದ ಭಾರತದ ಹಜ್ ಕೋಟಾವನ್ನು ಒಂದು ಲಕ್ಷದ ೭೫ ಸಾವಿರಕ್ಕೆ ಏರಿಸಲಾಗಿದೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡಿರುವ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಈ ವರ್ಷ ಮುಖ್ಯ ಕೋಟಾದಡಿ ೧ ಲಕ್ಷದ ೨೨ ಸಾವಿರಕ್ಕೂ ಹೆಚ್ಚು ಯಾತ್ರಿಕರಿಗೆ ಭಾರತೀಯ ಹಜ್ ಸಮಿತಿ ಮೂಲಕ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ವಿಮಾನ ಯಾನ, ಸಾರಿಗೆ, ಮಿನಾ ಶಿಬಿರ ಹಾಗೂ ವಸತಿ ಮತ್ತು ಸೇವೆಗಳು ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಸೌದಿಅರೇಬಿಯಾದ ಮಾರ್ಗಸೂಚಿಯಂತೆ ಪೂರ್ಣಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಉಳಿದ ಕೋಟಾವನ್ನು ವಾಡಿಕೆಯಂತೆ ಖಾಸಗಿ ಪ್ರವಾಸ ನಿರ್ವಾಹಕರಿಗೆ ನೀಡಲಾಗಿದೆ. ಪರಿಷ್ಕೃತ ಸೌದಿ ನಿಯಮಗಳಿಗೆ ಅನುಗುಣವಾಗಿ ೮೦೦ಕ್ಕೂ ಹೆಚ್ಚು ನಿರ್ವಾಹಕರನ್ನು ೨೬ ಸಂಯೋಜಿತ ಹಜ್ ಗುಂಪು ನಿರ್ವಾಹಕರನ್ನಾಗಿ ಒಟ್ಟುಗೂಡಿಸಿ, ಮುಂಚಿತವಾಗಿಯೇ ಕೋಟಾವನ್ನು ವಿತರಿಸಲಾಗಿದೆ.

<><><><>

ಬ್ರೆಜಿಲ್‌ನ ಬ್ರೆಜಿಲಿಯಾದಲ್ಲಿ ಇದೇ ೧೭ ರಂದು ನಡೆಯಲಿರುವ ೧೫ನೇ ಬ್ರಿಕ್ಸ್ ಕೃಷಿ ಸಚಿವರ ಸಭೆಯಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭಾರತೀಯ ನಿಯೋಗದ ನೇತೃತ್ವ ವಹಿಸಲಿದ್ದಾರೆ. ಸಹಕಾರ, ನಾವೀನ್ಯತೆ ಮತ್ತು ಸಮಾನ ವ್ಯಾಪಾರದ ಮೂಲಕ ಬ್ರಿಕ್ಸ್ ರಾಷ್ಟ್ರಗಳಲ್ಲಿ ಒಳಗೊಳ್ಳುವ ಮತ್ತು ಸುಸ್ಥಿರ ಕೃಷಿಗೆ ಉತ್ತೇಜನ ಎಂಬುದು ಈ ಬಾರಿಯ ೧೫ನೇ ಬ್ರಿಕ್ಸ್ ಕೃಷಿ ಸಚಿವರ ಸಭೆಯ ಧ್ಯೇಯ ವಾಕ್ಯವಾಗಿದೆ. ಸಭೆಯಲ್ಲಿ ಭಾರತದ ಜೊತೆಗೆ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ಈಜಿಪ್ಟ್, ಯುಎಇ, ಇಥಿಯೋಪಿಯಾ, ಇಂಡೋನೇಷಿಯಾ ಹಾಗೂ ಇರಾನ್ ಸೇರಿದಂತೆ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಕೃಷಿ ಸಚಿವರು ಮತ್ತಿತರ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ತಮ್ಮ ಬ್ರೆಜಿಲ್ ಭೇಟಿಯ ವೇಳೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಬ್ರೆಜಿಲ್‌ನ ಕೃಷಿ ಸಚಿವ ಕಾರ್ಲೋಸ್ ಹೆನ್ರಿಕ್ ಹಾಗೂ ಕೃಷಿ ಅಭಿವೃದ್ಧಿ ಸಚಿವ ಲೂಯಿಸ್ ಪೌಲೊ ಅವರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ಭೇಟಿಯ ಭಾಗವಾಗಿ ಅವರು, 'ಏಕ್‌ಪೇಡ್ ಮಾ ಕೆ ನಾಮ್ ಅಭಿಯಾನ'ದ ಮೂಲಕ ಪರಿಸರದ ಕುರಿತು ಜಾಗೃತಿ ಹಾಗೂ ತಾಯಿತನದ ಕುರಿತು ಗೌರವ ಮೂಡಿಸುವ ನಿಟ್ಟಿನಲ್ಲಿ ಬ್ರೆಜಿಲಿಯಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯಲ್ಲಿ ಆಯೋಜಿಸಿರುವ

ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಸಾವೊಪೌಲೊದಲ್ಲಿ ಅವರು, ಅಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ.

<><><><>

ವೇವ್ಸ್ ಆನಿಮೆ ಮತ್ತು ಮಾಂಗಾ ಸ್ಪರ್ಧೆಯ ರಾಜ್ಯ ಮಟ್ಟದ ಅರ್ಹತಾ ಸುತ್ತಿನ ಸ್ಪರ್ಧಿಯನ್ನು ಆಯ್ಕೆ ಮಾಡಲು, ಭಾರತೀಯ ಮಾಧ್ಯಮ ಮತ್ತು ಮನರಂಜನಾ ಸಂಘ, ಬೆಂಗಳೂರಿನ ಬಸವನಗುಡಿಯ ವಿವಿಎನ್ ಪದವಿ ಕಾಲೇಜಿನಲ್ಲಿಂದು ಡಬ್ಲ್ಯೂಎಎಂ ಅಂದರೆ ವೇವ್ಸ್ ಅನಿಮೆ ಮತ್ತು ಮಂಗಾ ಸ್ಪರ್ಧೆ ಆಯೋಜಿಸುತ್ತಿದೆ. ಕರ್ನಾಟಕದ ಅರ್ಹತಾ ಸುತ್ತಿನ ಸ್ಪರ್ಧಿ ಮುಂಬೈನಲ್ಲಿ ವೇವ್ಸ್ - ೨೦೨೫ರ ವೇಳೆ ನಡೆಯುವ ಡಬ್ಲ್ಯೂಎಎಂ ರಾಷ್ಟ್ರೀಯ ಅಂತಿಮ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ. ಈ ಕುರಿತು ಮಾತನಾಡಿರುವ ಭಾರತೀಯ ಮಾಧ್ಯಮ ಮತ್ತು ಮನರಂಜನಾ ಸಂಘದ ಕಾರ್ಯದರ್ಶಿ ಅಂಕುರ್ ಭಾಸಿನ್, ಬೆಂಗಳೂರು ನಾವೀನ್ಯತೆ ಮತ್ತು ಸೃಜನಶೀಲತೆಗೆ ಕೇಂದ್ರವಾಗಿದ್ದು, ಇಲ್ಲಿಂದ ಹೊರಹೊಮ್ಮುವ ಕಲೆಯನ್ನು ವೀಕ್ಷಿಸಲು ಉತ್ಸುಕರಾಗಿದ್ದೇವೆ. ಗ್ರ್ಯಾಂಡ್ ಫಿನಾಲೆಗೆ ಮೊದಲು, ಅಂತಿಮ ರಾಜ್ಯ ಅರ್ಹತಾ ಸುತ್ತಿನ ಸ್ಪರ್ಧೆ ಬೆಂಗಳೂರಿನಲ್ಲಿ ನಡೆಯುತ್ತಿದೆ. ಈ ಸ್ಪರ್ಧೆ ಭಾರತೀಯ ರಚನಾಕಾರರಿಗೆ ದೊಡ್ಡ ಕನಸುಗಳನ್ನು ಕಾಣಲು, ಸ್ಪರ್ಧಿಸಲು ಮತ್ತು ಅಂತಿಮವಾಗಿ ಜಾಗತಿಕವಾಗಿ ಗುರುತಿಸಿಕೊಳ್ಳಲು ರಾಷ್ಟ್ರೀಯ ವೇದಿಕೆಯನ್ನು ಒದಗಿಸುತ್ತದೆ ಎಂದು ಹೇಳಿದರು. ಬೆಂಗಳೂರಿಗಿಂತ ಮೊದಲು, ಗುವಾಹಟಿ, ಕೋಲ್ಕತ್ತಾ, ಭುವನೇಶ್ವರ, ದೆಹಲಿ, ವಾರಣಾಸಿ, ಮುಂಬೈ, ನಾಗ್ಪುರ, ಅಹಮದಾಬಾದ್, ಚೆನ್ನೈ ಮತ್ತು ಹೈದರಾಬಾದ್‌ನಲ್ಲಿ ಅರ್ಹತಾ ಸುತ್ತಿನ ಆವೃತ್ತಿಗಳು ನಡೆದಿವೆ. ಈ ಸ್ಪರ್ಧೆ ಜಪಾನೀಸ್ ಶೈಲಿಯ ಅನಿಮೇಟೆಡ್ ವಿಷಯ - ಅನಿಮೆ, ಜಪಾನೀಸ್ ಶೈಲಿಯ ಕಾಮಿಕ್ಸ್ -ಮಾಂಗಾ, ಡಿಜಿಟಲ್ ಚಿತ್ರಕಥೆ - ವೆಬ್‌ಟೂನ್‌ಗಳು, ಮೂಲ ಅಥವಾ ಅಭಿಮಾನಿ ಪಾತ್ರಗಳ ವೇಷಭೂಷಣ ಪ್ರದರ್ಶನ - ಕಾಸ್‌ಪ್ಲೇ, ಧ್ವನಿ ನಟನೆ ಎಂಬ ವಿಭಾಗಗಳಲ್ಲಿ ನಡೆಯುತ್ತಿದೆ.

<><><><>

ಹಿಮಾಚಲ ಪ್ರದೇಶ ಇಂದು ತನ್ನ ೭೮ನೇ ಸಂಸ್ಥಾಪನಾ ದಿನವನ್ನು ಆಚರಿಸುತ್ತಿದೆ. ಏಪ್ರಿಲ್ ೧೫, ೧೯೪೮ ರಂದು ೩೦ ಸಣ್ಣ ಮತ್ತು ದೊಡ್ಡ ಪ್ರಜಾಪ್ರಭುತ್ವದ ರಾಜ್ಯಗಳನ್ನು ವಿಲೀನಗೊಳಿಸಿ ರಾಜ್ಯವನ್ನು ರಚಿಸಲಾಯಿತು. ಅಂದಿನಿಂದ, ಏಪ್ರಿಲ್ ೧೫ ಅನ್ನು ಪ್ರತಿ ವರ್ಷ 'ಹಿಮಾಚಲ ದಿನ' ಎಂದು ಆಚರಿಸಲಾಗುತ್ತಿದೆ. ಮೊದಲ ಬಾರಿಗೆ ರಾಜ್ಯ ಮಟ್ಟದ ಹಿಮಾಚಲ ದಿನ ಆಚರಣೆಯು ಪಂಗಿ ಕಣಿವೆಯಲ್ಲಿ ನಡೆಯುತ್ತಿದ್ದು, ಸ್ಥಳೀಯ ನಿವಾಸಿಗಳಲ್ಲಿ ಹೆಚ್ಚಿನ ಉತ್ಸಾಹವನ್ನು ಮೂಡಿಸುತ್ತಿದೆ. ಹಿಮಾಚಲ ದಿವಸ್ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ನಾಗರಿಕರಿಗೆ ಪ್ರಧಾನಿ ನರೇಂದ್ರ ಮೋದಿ ಶುಭಾಶಯ ಕೋರಿದ್ದಾರೆ.

<><><><>

ರಾಷ್ಟ್ರೀಯ ಲೋಕ ಜನಶಕ್ತಿ ಪಕ್ಷ-ಆರ್‌ಎಲ್‌ಜೆಪಿ ಎನ್‌ಡಿಎ ಜೊತೆಗಿನ ಸಂಬಂಧವನ್ನು ಕಡಿದುಕೊಳ್ಳುವುದಾಗಿ ಘೋಷಿಸಿದೆ. ಪಾಟ್ನಾದಲ್ಲಿ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಪಕ್ಷದ ಅಧ್ಯಕ್ಷ ಮತ್ತು ಮಾಜಿ ಕೇಂದ್ರ ಸಚಿವ ಪಶುಪತಿ ಕುಮಾರ್ ಪರಾಸ್ ಈ ಘೋಷಣೆ ಮಾಡಿದ್ದಾರೆ. ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪರಾಸ್, ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಉಳಿಯುವುದರಲ್ಲಿ ಯಾವುದೇ ಮೌಲ್ಯವಿಲ್ಲ ಎಂದು ಹೇಳಿದರು. ಬಿಹಾರದಲ್ಲಿ ತಮ್ಮ ಪಕ್ಷವನ್ನು ಸೂಕ್ತವಾಗಿ ಗೌರವಿಸುವ ಹೊಸ ಮೈತ್ರಿಕೂಟವನ್ನು ಅನ್ವೇಷಿಸಲಾಗುತ್ತಿದೆ ಎಂದು ಅವರು ಹೇಳಿದರು.

<><><><>

ಆಕಾಶವಾಣಿ ಹೈದರಾಬಾದ್ ಕೇಂದ್ರವು ಇಂದು ತನ್ನ ವಜ್ರ ಮಹೋತ್ಸವವನ್ನು ಆಚರಿಸುತ್ತಿದೆ. ಹಿಂದಿನ ಹೈದರಾಬಾದ್ ರಾಜ್ಯದಲ್ಲಿದ್ದ ನಿಜಾಮರ ಡೆಕ್ಕನ್ ರೇಡಿಯೋ ೧೯೫೦ರಲ್ಲಿ ಇದೇ ದಿನ ಭಾರತ ಸರ್ಕಾರದ ಸ್ವಾಧೀನಕ್ಕೆ ಬಂದಿತು ಮತ್ತು ನಂತರದ ದಿನಗಳಲ್ಲಿ ಆಕಾಶವಾಣಿ ವ್ಯಾಪ್ತಿಗೆ ಬಂದಿತು. ಆಕಾಶವಾಣಿ ಮತ್ತು ಸುದ್ದಿ

ಸೇವೆಗಳ ವಿಭಾಗದ ಮಹಾನಿರ್ದೇಶಕಿ ಡಾ. ಪ್ರಜ್ಞಾ ಪಲಿವಾಲ್ ಗೌರ್ ಅವರು ಆಕಾಶವಾಣಿ ಹೈದರಾಬಾದ್ ಆವರಣದಲ್ಲಿ ವಜ್ರ ಮಹೋತ್ಸವದ ಪೈಲಾನ್ ಅನ್ನು ವರ್ಚುವಲ್ ಮೂಲಕ ಅನಾವರಣಗೊಳಿಸಲಿದ್ದಾರೆ.

<><><><>

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಹಳ್ಳಿಯೊಂದರಲ್ಲಿ ನಿನ್ನೆ ರಾತ್ರಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿದೆ. ಪೂಂಚ್ ಜಿಲ್ಲೆಯ ಸುರಂಕೋಟ್ ಉಪ ವಿಭಾಗದ ಲಸಾನಾ ಗ್ರಾಮದಲ್ಲಿ ನಿನ್ನೆ ರಾತ್ರಿ ಭದ್ರತಾ ಪಡೆಗಳು ಭಯೋತ್ಪಾದಕರ ಉಪಸ್ಥಿತಿಯ ಬಗ್ಗೆ ಮಾಹಿತಿ ಪಡೆದ ನಂತರ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದಾಗ ಗುಂಡಿನ ಚಕಮಕಿ ನಡೆದಿದೆ ಎಂದು ನಮ್ಮ ವರದಿಗಾರರು ವರದಿ ಮಾಡಿದ್ದಾರೆ.

<><><><>

ಉತ್ತರ ಪ್ರದೇಶದ ಝಾನ್ಸಿಯಲ್ಲಿ ಇಂದು ಸಂಜೆ ನಡೆಯಲಿರುವ ೧೫ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಶಿಪ್ ೨೦೨೫ ರ ಫೈನಲ್ ಪಂದ್ಯದಲ್ಲಿ ಮಧ್ಯಪ್ರದೇಶ ಮತ್ತು ಪಂಜಾಬ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಇದಲ್ಲದೆ, ಆತಿಥೇಯ ಉತ್ತರ ಪ್ರದೇಶ ಮತ್ತು ಮಣಿಪುರ ತಂಡಗಳು ೩ ಮತ್ತು ೪ನೇ ಸ್ಥಾನಗಳಿಗಾಗಿ ಸಂಜೆ ೫ ಗಂಟೆಯಿಂದ ಸೆಣಸಾಟ ನಡೆಸಲಿವೆ.

<><><><>

ಇಂದು ಪಂಜಾಬ್‌ನಲ್ಲಿ ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ಕೊಲ್ಕತ್ತಾ ನೈಟ್‌ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಉತ್ತರ ಪ್ರದೇಶದ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಐಪಿಎಲ್ ಟಿ-೨೦ ಪಂದ್ಯದಲ್ಲಿ, ಚೆನ್ನೈ ಸೂಪರ್ ಕಿಂಗ್ಸ್ ತಂಡವು ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ೫ ವಿಕೆಟ್‌ಗಳ ಜಯ ಸಾಧಿಸಿದೆ.

<><><><>

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ೨೦೨೫ರ ಎರಡನೇ ಚರಣದಲ್ಲಿ ಸ್ಪರ್ಧೆಗಳು ಪೆರುವಿನ ಲಿಮಾದಲ್ಲಿ ಇಂದಿನಿಂದ ಪ್ರಾರಂಭಗೊಳ್ಳಲಿವೆ. ಶಾರ್ಟ್‌ಗನ್, ರೈಫಲ್ ಮತ್ತು ಪಿಸ್ತೂಲ್ ಎಂಬ ಮೂರು ವಿಭಾಗಗಳಲ್ಲಿ ೪೨ ಸದಸ್ಯರ ಭಾರತೀಯ ತಂಡ ಸ್ಪರ್ಧಿಸುತ್ತಿವೆ. ಬ್ಯೂನೊಸ್ ಏರಿಸ್‌ನಲ್ಲಿ ನಡೆದ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯ ಮೊದಲ ಚರಣದಲ್ಲಿ ಭಾರತ ಈಗಾಗಲೇ ೪ ಚಿನ್ನ, ೨ ಬೆಳ್ಳಿ ಮತ್ತು ೨ ಕಂಚಿನ ಪದಕಗಳೊಂದಿಗೆ ಒಟ್ಟು ೮ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಮೊದಲನೇ ಚರಣದಲ್ಲಿ ಯಾವುದೇ ಪದಕ ಗಳಿಸಲು ವಿಫಲವಾದರೆ, ಎರಡೂ ಬಾರಿ ಒಲಿಂಪಿಕ್ ವಿಜೇತೆ ಮನುಭಾಕರ್ ಎರಡನೇ ಚರಣದಲ್ಲಿ ಪದಕ ಗಳಿಸುವ ನಿರೀಕ್ಷೆ ಇದೆ. ಇಂದು ರಾತ್ರಿ ೧೦.೧೫ಕ್ಕೆ ನಡೆಯಲಿರುವ ಪುರುಷರ ೧೦ ಮೀಟರ್ ಏರ್‌ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಸೌರಬ್ ಚೌಧರಿ, ರವೀಂದ್ರ ಸಿಂಗ್, ವರುಣ್ ತೋಮರ್, ಅಮಿತ್ ಶರ್ಮಾ ಮತ್ತು ಆಕಾಶ್ ಬಾರಧ್ವಾಜ್ ಕಣಕ್ಕಿಳಿಯುತ್ತಿದ್ದಾರೆ. ಈ ಟೂರ್ನಿಯಲ್ಲಿ ಸ್ವರ್ಣ ಪದಕ ಗಳಿಸುವ ಪ್ರತಿಯೊಬ್ಬ ಶೂಟರ್ ಡಿಸೆಂಬರ್‌ನಲ್ಲಿ ಕತಾರ್‌ನ ದೋಹದಲ್ಲಿ ನಡೆಯಲಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ಗೆ ಅರ್ಹತೆ ಪಡೆಯಲಿದ್ದಾರೆ.

<><> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <><>